ಉತ್ತರ ಕನ್ನಡ ಜಿಲ್ಲೆಯಲ್ಲಿ ಎಂ.ಎನ್.ಪಿ. ಯೋಜನೆ ಬಗ್ಗೆ

35 (707) **ಶ್ರೀ ಜಿ.ಡಿ.ನಾಯ್ಕ (ಭಟ್ಕಳ)** : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆ ಪಂಚಾಯತ್ ಭಟ್ಕಳ ತಾಲ್ಲೂಕಿನ ಬೆಳ್ಕೆ ಮತ್ತು ಮಾವಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಂ.ಎನ್.ಪಿ. ಯೋಜನೆ ಹಾಗೂ ಇತರೆ ವೈಯಕ್ತಿಕ ಕುಡಿಯುವ ನೀರಿನ ಯೋಜನೆಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ; ವಿವರ ನೀಡುವುದು;

ಆ) ಈ ಕುಡಿಯುವ ನೀರಿನ ಯೋಜನೆಯಡಿ ಕೊರೆಯಲಾದ ಹಾಗೂ ತೋಡಲಾದ ಬಾವಿಗಳ ವಿವರ, ಸರ್ವೆ ನಂಬರ್ ಹಾಗೂ ಫಲಾನುಭವಿಗಳ ಹೆಸರು ಮತ್ತು ವಿಳಾಸದೊಂದಿಗೆ ಕಳೆದ ಮೂರು ವರ್ಷದಿಂದ ಖರ್ಚು ಬಾಬ್ತಿನೊಂದಿಗೆ ಕ್ಷೇತ್ರವಾರು ವಿವರ ನೀಡುವುದು;

ಇ) ಈ ಜಿಲ್ಲಾ ಪಂಚಾಯತ್ ಕ್ಷೇತ್ರದಲ್ಲಿ ಕೆರೆಗಳ ಅಭಿವೃದ್ಧಿಗೆ ಖರ್ಚು ಮಾಡಲಾದ ಮೊತ್ತ ಹಾಗೂ ಕೆರೆಗಳ ವಿವರ ನೀಡುವುದು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಮತ್ತು ಆ) ವಿವರಗಳನ್ನು ಅನುಬಂಧ–1 ರಲ್ಲಿ ನೀಡಿದೆ.

ಇ) ಬೆಳ್ಕೆ ಗ್ರಾ. ಪಂ. ತಲಾನಬಾಬು ಕೆರೆ ಸುಧಾರಣೆಗಾಗಿ ರೂ.16.00 ಲಕ್ಷ ಬಿಡುಗಡೆಯಾಗಿದ್ದು, ರೂ.13.01 ಲಕ್ಷ ವೆಚ್ಚವಾಗಿದೆ. ಅಂತೆಯೇ, ಮಾವಳ್ಳಿ ಗ್ರಾ.ಪಂ.ಮಾಲೆಕೊಡ್ಲು ಕೆರೆ ಸುಧಾರಣೆಗಾಗಿ ರೂ.16.00 ಲಕ್ಷ ಬಿಡುಗಡೆಯಾಗಿದ್ದು, ರೂ.12.55 ಲಕ್ಷ ವೆಚ್ಚವಾಗಿದೆ.

ಶ್ರೀ ಜಿ.ಡಿ. ನಾಯ್ಕ : ಮಾನ್ಯ ಸಚಿವರು ನಾನು ಕೇಳಿದ ಪ್ರಶ್ನೆಗೆ ಉತ್ತರಿಸಿದ್ದಾರೆ. ಆದರೆ, ಕೆಲವು ಕಡೆ ತಗಲುವ ವೆಚ್ಚ ಒಟ್ಟು ಅಂದಾಜು ಕೊಟ್ಟಿದ್ದಾರೆ. ಎಷ್ಟು ಖರ್ಚಾಗಿದೆ, ಮುಗಿದಿದೆಯೇ ಎಂಬುದನ್ನು ಕೊಟ್ಟಿಲ್ಲ. ಇತರೆ ಕುಡಿಯುವ ನೀರಿನ ವಿವರಗಳನ್ನು ಕೊಟ್ಟಿಲ್ಲ. ನಾನು ಮುಖ್ಯವಾಗಿ ಎರಡು ಕ್ಷೇತ್ರಗಳಲ್ಲಿ ಕುಡಿಯುವ ನೀರಿನ ಬಾವಿ ತೆಗೆದಿದ್ದಾರೆ ಆ ಬಾವಿಗಳು ಇರುವ ಸರ್ವೆ ನಂಬರ್ ಅನ್ನು Sub Registrar Officer ನಲ್ಲಿ register

ಮಾಡಿಸಿದ್ದಾರೆ. ನನ್ನ ಪ್ರಕಾರ ಸಾಕಷ್ಟು ಹೊಸ ಬಾವಿಗಳನ್ನು ಕೊರೆದಿಲ್ಲ. ಇದ್ದ ಬಾವಿಗಳಿಗೇ ಕಟ್ಟೆ ಕಟ್ಟಿ plaster ಮಾಡಿ ಬಿಲ್ ಮಾಡುವ ವ್ಯವಸ್ಥೆಯಾಗಿದೆ. ಇತರೆ ಬಾವಿಗಳ ವಿವರಗಳನ್ನು ಎಲ್ಲಿಯೂ ಕೊಟ್ಟಿಲ್ಲ. ನಾನು ನೋಡಿದ್ದೇವೆ, ಬದಲಾವಣೆ ಎಂದು ಕೊಟ್ಟಿದ್ದೀರಿ. ಬದಲಾವಣೆಗೆ ಹಣ ಖರ್ಚಾಗಿದೆಯೋ, ಇಲ್ಲವೋ? ಅಥವಾ ಬದಲಾವಣೆ ಮಾಡಿ ಯಾರಿಗೆ ಕೊಟ್ಟಿದೆ ಎಂದು ಹೇಳಲಿಲ್ಲ. ಕೆಲವು ಕಡೆ 2007–08 ರಿಂದ ಕೂಡ ಮುಗಿದಿಲ್ಲವೆಂದು ಹೇಳಿದ್ದೀರಿ. ಸರ್ವೆ ನಂಬರ್ ಏನೂ ಕೊಟ್ಟಿಲ್ಲ. 2008–09ರಂದು ಕೂಡ ಅದೇ ರೀತಿಯ endorsement ಬಂದಿದೆ. ಅದಕ್ಕಾಗಿ ನಾನು ಮಾನ್ಯ ಸಚಿವರಿಗೆ ಕೇಳಿಕೊಳ್ಳುವುದಿಷ್ಟೆ, ಮುಖ್ಯವಾಗಿ ಇದರ ಬಗ್ಗೆ ತನಿಖೆ ಮಾಡಿಸಿ. ಕುಡಿಯುವ ನೀರಿನ ವಿಷಯದಲ್ಲಿ ಅವ್ಯವಹಾರವೇನಾಗಿದೆ ಎಂಬುದನ್ನು ತನಿಖೆ ಮಾಡಬೇಕು. ಸಂಬಂಧಪಟ್ಟ ಸರ್ವೆ ನಂಬರ್‌ಗಳಲ್ಲಿ ಬಾವಿಗಳೇ ಇಲ್ಲ, ಹಳೆಯ ಬಾವಿಗಳನ್ನೇ ಹೊಸ ಬಾವಿಗಳೆಂದು ಲೆಕ್ಕ ತೋರಿಸಿದ್ದಾರೆ. ಖರ್ಚಾಗಿದೆ ಎಂದು ಸುಮ್ಮಸುಮ್ಮನೆ ಬಿಲ್ ಮಾಡುವ ವ್ಯವಸ್ಥೆಯಾಗಿದೆ. ಅದಕ್ಕಾಗಿ ನಾನು ತಮ್ಮಲ್ಲಿ ವಿವರ ಕೇಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಗೌರವಾನ್ವಿತ ಸದಸ್ಯರು ಭಟ್ಕಳ ತಾಲ್ಲೂಕಿನ ವಿಷಯಗಳ ಬಗ್ಗೆ ಅದರಲ್ಲಿಯೂ ಮುಖ್ಯವಾಗಿ ಬೆಳ್ಕೆ ಮತ್ತು ಮಾವಳ್ಳಿ ಜಿಲ್ಲಾಪಂಚಾಯತ್ ಕ್ಷೇತ್ರಗಳಲ್ಲಿ ಇರುವ ಕುಡಿಯುವ ನೀರಿನ ಯೋಜನೆಗಳ ಬಗ್ಗೆ ಮಾಹಿತಿಗಳನ್ನು ಕೇಳಿದ್ದಾರೆ. ಆ ಮಾಹಿತಿಯನ್ನು ಸಂಪೂರ್ಣವಾಗಿ ಒದಗಿಸಿದ್ದೇವೆ. ಎಷ್ಟು ಅನುದಾನ ಬಂತು, ಎಷ್ಟು ಖರ್ಚು ಮಾಡಿದ್ದಾರೆ ಮತ್ತು ಕೆರೆಗಳ ಅಭಿವೃದ್ಧಿಗೆ ಎಷ್ಟು ಖರ್ಚು ಮಾಡಿದೆ, ಕೆರೆಗಳ ವಿವರ ಈ ಎಲ್ಲವನ್ನೂ detail ಆಗಿ ಒದಗಿಸಿಕೊಟ್ಟಿದ್ದೇವೆ. ಅವರೀಗ ಕೆಲವೊಂದು ಗ್ರಾಮಗಳಲ್ಲಿ ಕೆಲವು ಬಾವಿಗಳನ್ನು ಕೊರೆಯುವಂಥ ಕೆಲಸವೇನು ಮಾಡಿದ್ದಾರೆ, ಅದಾಗಿಲ್ಲವೆನ್ನುವಂಥದ್ದು ಅಥವಾ ಅದು ಖೊಟ್ಟಿಯಾಗಿದೆ, ಖೊಟ್ಟಿ ದಾಖಲೆಯನ್ನು ಸೃಷ್ಟಿಸಲಾಗಿದೆ ಎನ್ನುವಂಥ ವಿಚಾರಗಳನ್ನು ಹೇಳಿದ್ದಾರೆ. ಆದರೆ, ಈ ಎಲ್ಲಾ ಮಾಹಿತಿಗಳು ಬೇಕೆಂದು ತಮ್ಮ ಪ್ರಶ್ನೆಯಲ್ಲಿ ಕೇಳಿಲ್ಲ. ಇಲ್ಲಿ ಅವ್ಯವಹಾರವಾಗಿದೆ ಎನ್ನುವುದಾಗಲಿ, ಈ ಬಗ್ಗೆ ತನಿಖೆ ಮಾಡಬೇಕೆಂದಾಗಲಿ ಇದರ ಬಗ್ಗೆ ಪ್ರಸ್ತಾಪಿಸಿಲ್ಲ. ಅವರು ಕೇಳಿದ ಪ್ರಶ್ನೆಗೆ details ಕೊಟ್ಟಿದ್ದೇವೆ. ಎಲ್ಲಿಯಾದರೂ ಏನಾದರೂ ಅವ್ಯವಹಾರವಾಗಿದ್ದರೆ ಅವರು specific ಆಗಿ ಪ್ರಶ್ನೆ ಮುಖಾಂತರ ಕೇಳಿದರೆ ಅಥವಾ

ಇನ್ನಿತರ ಮೂಲಕ ಕೇಳಿದರೆ ಅದಕ್ಕೆ ನಾನು ಪ್ರತ್ಯೇಕವಾಗಿ ವಿವರವನ್ನು ಕೊಡುತ್ತೇನೆ. ಎಲ್ಲಿಯಾದರೂ ತನಿಖೆ ಮಾಡುವ ಅವಶ್ಯಕತೆ ಇದ್ದರೆ ನಾನು ತನಿಖೆಯನ್ನು ಸಹ ಮಾಡಿಸುತ್ತೇನೆ.

(11 - 40 A.M)

ಶ್ರೀ ಜೆ.ಡಿ.ನಾಯ್ಕ : ನಾನು survey number wise ಕೇಳಿದ್ದೇನೆ. ಆದರೆ, ಅವರ ಉತ್ತರದಲ್ಲಿ survey number ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಯಾವ ಗ್ರಾಮದಲ್ಲಿ ಎನುವ ವಿವರ ಕೊಟ್ಟಿದ್ದೇವೆ. ಉದಾಹರಣೆಗೆ ಕಬ್ಬೂರು ಮಂಜಯ್ಯ ಮಾಸಪ್ಪ ನಾಯ್ಕ ಮನೆ ಹತ್ತಿರ ಬಾವಿ ನಿರ್ಮಾಣ ಎಂದು ಇದೆ. ಇವರು ಸರ್ವೆ ನಂಬರ್ ಕೊಟ್ಟಿಲ್ಲ ಎಂದರೆ ಎಲ್ಲಾ ಮಾಹಿತಿ ಕೊಡಬೇಕಾದರೆ 2–3 ತಿಂಗಳು ಬೇಕಾಗುತ್ತದೆ. ಪ್ರತಿಯೊಂದು ಸರ್ವೆ ನಂಬರ್ ಮಾಹಿತಿಯನ್ನು ಕೊಡಬೇಕೆಂದರೆ question hour ನಲ್ಲೇ ಪ್ರತಿಯೊಂದನ್ನೂ ತೆಗೆದುಕೊಳ್ಳಬೇಕೆಂದರೆ 1–2 ತಿಂಗಳು time ಕೊಡಬೇಕಾಗುತ್ತದೆ.

ಶ್ರೀ ಜೆ.ಡಿ. ನಾಯ್ಕ : ನಾನು ಈ ಪ್ರಶ್ನೆಯನ್ನು ಎರಡನೇ ಸಲ ಕೇಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಎಲ್ಲಿಯಾದರೂ ಅವ್ಯವಹಾರ ಆಗಿದ್ದರೆ ನೀವು ಆ ಕ್ಷೇತ್ರದ ಶಾಸಕರಿದ್ದೀರಿ, ತಮ್ಮಗೆ ಗೊತ್ತಿರುತ್ತದೆ, ಇಂಥ Village ನಲ್ಲಿ ಕೊಳವೆ ಬಾವಿ ಕೊರೆದಿದೆ ಎಂದು ಹೇಳುತ್ತೇವೆ. ಅಲ್ಲಿ ಕೊರೆದಿಲ್ಲವೆನ್ನುವುದು ನಿಮಗೆ ಗೊತ್ತಿದ್ದರೆ ನೀವು ನಮಗೆ ಆ ಬಗ್ಗೆ ಮಾಹಿತಿ ಕೇಳಿ. ತನಿಖೆ ಮಾಡಿ ಎಂದು ಕೇಳಿ. ನಾನು definite ಆಗಿ ತನಿಖೆ ಮಾಡಿಸುತ್ತೇನೆ.

ಶ್ರೀ ಜೆ.ಡಿ. ನಾಯ್ಕ : ತಾವು ತನಿಖೆ ಮಾಡಿಸಿ. ಅವ್ಯವಹಾರ ಆಗಿದೆ ಎಂದು ನಾನು ಈಗ ಹೇಳುತ್ತೇನೆ. Survey number ಅಂತೂ ತಿಳಿಸಿಲ್ಲ. ಹಣವೂ ಖರ್ಚಾಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ತಾವು details ಕೊಡಿ. ಯಾವ್ಯಾವ village ನಲ್ಲಿ ಎಷ್ಟೆಷ್ಟು ಕೊಳವೆ ಬಾವಿ ಕೊರೆಯಲಾಗಿದೆ ಎನ್ನುವ ವಿವರ ಕೊಟ್ಟಿದ್ದೇವೆ. ಯಾರ ಮನೆಯ ಹತ್ತಿರ ಎಂದೂ ಸಹ ಮಾಹಿತಿ ಕೊಟ್ಟಿದ್ದೇವೆ. ಯಾವ ರೀತಿಯಾಗಿ ಅವ್ಯವಹಾರವಾಗಿದೆ ಎನ್ನುವ ಬಗ್ಗೆ ಹೇಳಿ.

ಅಧ್ಯಕ್ಷರು : ನಾಯ್ಕರವರೆ, ಮಂತ್ರಿಯವರಿಗೆ ತಾವು details ಕೊಡಿ.

ಶ್ರೀ ಜಗದೀಶ್ ಶೆಟ್ಟರ್ : ವಿವರ ಕೊಡಿ, ನಾನು ತನಿಖೆ ಮಾಡಿಸುತ್ತೇನೆ.

ಶ್ರೀ ಜೆ.ಡಿ. ನಾಯ್ಕ : ಮಾನ್ಯ ಮಂತ್ರಿಯವರು survey number ವಿವರ ಕೊಟ್ಟಿಲ್ಲ. ಆ ಮಾಹಿತಿ ಕೊಡಲು ಬಹಳ ದಿವಸ ಬೇಕೆಂದು ಹೇಳುತ್ತಾರೆ. ತನಿಖೆಗಾದರೂ refer ಮಾಡಿದರೆ ಗೊತ್ತಾಗುತ್ತದೆ. ತನಿಖೆಯಲ್ಲಿ ಸಂಪೂರ್ಣವಾಗಿ ಗೊತ್ತಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ತನಿಖೆ ಮಾಡಿಸಬಹುದು, ಆದರೆ, specific ಆಗಿ allegation ಮಾಡಿದರೆ ನಾವು ತನಿಖೆ ಮಾಡಿಸಬಹುದು. ಇಂಥ ಗ್ರಾಮದಲ್ಲಿ ಇಂಥಲ್ಲಿ ಅವ್ಯವಹಾರವಾಗಿದೆ, ಬಾವಿ ಕೊರೆಯಬೇಕಾಗಿತ್ತು ಕೊರೆದಿಲ್ಲ ಎಂದು ನೀವು ಹೇಳಿ. ಕೆಲವು ಉದಾಹರಣೆಗಳನ್ನು ಕೊಡಿ. ನಾನು definite ಆಗಿ ತನಿಖೆ ಮಾಡಿಸುತ್ತೇನೆ.

ಶ್ರೀ ಜೆ.ಡಿ. ನಾಯ್ಕ : ನಿಮ್ಮ ಉತ್ತರ ಸರಿಯಿಲ್ಲ. ನಿಮ್ಮ ಉತ್ತರದಿಂದ ನಾನು ತೃಪ್ತನಾಗಿಲ್ಲ. ಅದಕ್ಕಾಗಿ ತನಿಖೆ ಮಾಡಿಸಿ ಎಂದು ಹೇಳುತ್ತಿದ್ದೇನೆ. ನಿಮ್ಮ ಉತ್ತರ ಸರಿ ಇದ್ದಿದ್ದರೆ ನಾನು ಪ್ರಶ್ನೆ ಕೇಳದೆ ಸುಮ್ಮನೆ ಕುಳಿತುಕೊಳ್ಳುತ್ತಿದ್ದೆ. ಉತ್ತರ ಸರಿಯಿಲ್ಲ, ಇದು ಸತ್ಯಕ್ಕೆ ದೂರವಾಗಿದೆ, ಅಂಥ ಬಾವಿಗಳೇ ಇಲ್ಲ, ಬೇಕಾಬಿಟ್ಟಿ ಬಾವಿ ಕೊರೆದಿದ್ದಾರೆ, ಅಂಥ ಬಾವಿಗಳ ಬಗ್ಗೆ ತನಿಖೆ ಮಾಡಬೇಕೆಂದು ಕೇಳುತ್ತೇನೆ.

ದಾಸರಹಳ್ಳಿ ವ್ಯಾಪ್ತಿಯಲ್ಲಿ ಪದವಿ ಪೂರ್ವ ಕಾಲೇಜು ಸ್ಥಾಪನೆಯ ಬಗ್ಗೆ

36 (681) ಶ್ರೀ ಮುನಿರಾಜು ಎಸ್. (ದಾಸರಹಳ್ಳಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪದವಿ ಪೂರ್ವ ಕಾಲೇಜುಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಹೊಸದಾಗಿ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಇ) ಯಾವ ವರ್ಷದಿಂದ ಕಾಲೇಜುಗಳನ್ನು ಎಲ್ಲಿ ಪ್ರಾರಂಭಿಸಲಾಗುವುದು?